## ನಿಮ್ಮೊಡನೆ

# ಇಂಗ್ಲಿಷ್ ಮೇಲೆ ನಿಯಂತ್ರಣ

ಇಂಗ್ಲಿಷ್ ಕಾನ್ವೆಂಟ್ ಮಾದರಿಯಲ್ಲೇ 'ಕರ್ನಾಟಕ ಪಬ್ಲಿಕ್ ಶಾಲೆ'ಗಳನ್ನು ಆರಂಭಿಸುವುದಾಗಿ ಶಿಕ್ಷಣ ಸಚಿವರು ಕೆಲವು ವಾರಗಳ ಹಿಂದೆ ನುಡಿದಿದ್ದರು. ಆದರೆ ಮುಖ್ಯಮಂತ್ರಿಯವರ ಬಜೆಟ್ ಭಾಷಣದಲ್ಲಿ ಆ ಬಗ್ಗೆ ಯಾವ ಉಲ್ಲೇಖವೂ ಇಲ್ಲ!

ರಾಮನಗರ ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಒಂದು ಮತ್ತು ಎರಡನೇ ತರಗತಿಯಲ್ಲಿ ಮಕ್ಕಳಿಗೆ 'ಸಂವಹನ ಇಂಗ್ಲಿಷ್' ಕಲಿಕೆಯ ಜತೆಗೆ ಕಾನ್ವೆಂಟ್ ಪಠ್ಯಗಳ ಬೋಧನೆ ನಡೆಸಬೇಕೆಂದು ಅಲ್ಲಿನ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮೌಖಿಕ ಆದೇಶ ನೀಡಿರುವುದು ಕುತೂಹಲಕರ ಸಂಗತಿ. ರಾಮನಗರ ಒಟ್ಟಾರೆ ಗ್ರಾಮಾಂತರ ಪ್ರದೇಶವಾದರೂ, ಮಹಾನಗರ ಬೆಂಗಳೂರಿಗೆ ಅತೀ ಸಮೀಪದಲ್ಲೇ ಇರುವ ಹಿನ್ನೆಲೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ– ಖಾಸಗಿ ತಾರತಮ್ಯವನ್ನು ಅತೀ ಸಮೀಪದಿಂದ ಅನುಭವಿಸುತ್ತಿದೆ ಎನ್ನುವುದು ಸ್ಪಷ್ಟ. ಈ ಹಿನ್ನೆಲೆಯಲ್ಲೇ ಅಲ್ಲಿನ ಜಿಲ್ಲಾ ಪಂಚಾಯಿತ್ತಿ ಮತ್ತು ಶಿಕ್ಷಣ ಇಲಾಖೆ ಜತೆಗೂಡಿ ಇಂಗ್ಲಿಷ್ ಕಲಿಕೆಯ ಹೊಸ ಹೆಜ್ಜೆ ಇಟ್ಟಿದೆ. ಕನ್ನಡ ಕೇವಲ ಬಡವರು ಮತ್ತು ಹಿಂದುಳಿದವರ ಭಾಷೆಯಾಗಿಯೂ, ಇಂಗ್ಲಿಷ್ ಹಣವುಳ್ಳ ಪ್ರತಿಷ್ಠಿತರ ಭಾಷೆಯಾಗಿಯೂ ಬೆಳೆಯುತ್ತಿರುವ ಈ ದಿನಗಳಲ್ಲಿ, ಕೇವಲ ಕನ್ನಡ ಬಲ್ಲವರ ಕೀಳರಿಮೆಯನ್ನು ಹೋಗಲಾಡಿಸಲು ಇಂತಹ ಕ್ರಮಗಳು ಅಗತ್ಯವಾಗಿದೆ. ಒಂದನೇ ತರಗತಿಯಲ್ಲೇ ಭಾಷೆಯಾಗಿ ಇಂಗ್ಲಿಷನ್ನು ಕಲಿಸಿದರೆ, ಸರ್ಕಾರಿ ಶಾಲೆಗಳ ಮಕ್ಕಳೂ ಕಾನ್ವೆಂಟ್ ಹುಡುಗರಂತೆ ಇಂಗ್ಲಿಷ್ ಮಾತನಾಡುವುದರ ಮೂಲಕ ಭಾಷಾ ತಾರತಮ್ಯ ಇಲ್ಲವಾಗುತ್ತದೆ ಎನ್ನುವುದು ಈ ಉಪಾಯದ ಹಿಂದಿನ ಉದ್ದೇಶ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಬಜೆಟ್ ಭಾಷಣದಲ್ಲಿ, ಸರಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ವಿಷಯವನ್ನು ತಾತ್ವಿಕವಾಗಿ ಎತ್ತಿಹಿಡಿದಿದ್ದಾರೆ. ಒಂದು ಅಂದಾಜಿನ ಪ್ರಕಾರ, ಸರಕಾರಿ ಪ್ರಾಥಮಿಕ– ಪ್ರೌಢ ಶಾಲೆಗಳಲ್ಲಿ ಸುಮಾರು ಒಂದು ಕೋಟಿ ವಿದ್ಯಾರ್ಥಿಗಳಿದ್ದಾರೆ. ಖಾಸಗಿ ಇಂಗ್ಲಿಷ್ ಕಾನ್ವೆಂಟ್‌ಗಳ ಮೋಹದಿಂದ ತಪ್ಪಿಸಿಕೊಂಡು ಇಷ್ಟೊಂದು ವಿದ್ಯಾರ್ಥಿಗಳು ಇನ್ನೂ ಸರ್ಕಾರಿ ಶಾಲೆಗಳಲ್ಲಿ ಉಳಿದಿದ್ದಾರೆಂದರೆ ಅದಕ್ಕೆ ಅವರ ಪೋಷಕರ ಕನ್ನಡ ಮೋಹ ಕಾರಣವಲ್ಲ; ಬಡತನ, ಗ್ರಾಮೀಣ ಪರಿಸರ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವುದು ಮುಖ್ಯ ಕಾರಣ. ಎಷ್ಟೋ ಗ್ರಾಮೀಣ ಶಾಲೆಗಳಲ್ಲಿ 1ರಿಂದ 7ನೇ ತರಗತಿವರೆಗೆ 10–20 ವಿದ್ಯಾರ್ಥಿಗಳಿದ್ದಾರೆ ಎಂದು ಸ್ವತಃ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರೇ ಹೇಳಿದ್ದಾರೆ. ಮಧ್ಯಮ ವರ್ಗದ ಜನರು ಕನ್ನಡ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ತಯಾರಿದ್ದರೂ, ಅಲ್ಲಿ ಮೂಲಸೌಕರ್ಯಗಳ ಕೊರತೆ ಇರುವುದು ದೊಡ್ಡ ಹಿನ್ನಡೆಯಾಗಿದೆ. ಮುಖ್ಯವಾಗಿ 16 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ಸರಕಾರವೇ ಒಪ್ಪಿಕೊಂಡಿದೆ. ಉದ್ಯೋಗ ಮಾರುಕಟ್ಟೆಯಲ್ಲಿ ಇಂಗ್ಲಿಷ್‌ಗೆ ಇರುವ ಅತೀವ ಮಹತ್ವದ ಹಿನ್ನೆಲೆಯಲ್ಲಿ, ನಮ್ಮ ಜನ ಹೊಟ್ಟೆಬಟ್ಟೆ ಕಟ್ಟಿಯಾದರೂ ದುಬಾರಿ ಕಾನ್ವೆಂಟ್‌ಗಳಿಗೆ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಇದು ಕನ್ನಡದ ಮೇಲಿನ ಅವಗಣನೆ ಎಂದು ಭಾವಿಸುವುದಕ್ಕಿಂತ, ಬದುಕುವ ದಾರಿ ಹುಡುಕುವ ಯತ್ನ ಎನ್ನಬೇಕಿದೆ. ಈ ಹಿನ್ನೆಲೆಯಲ್ಲಿ ಸರಕಾರ ಸರ್ಕಾರಿ ಶಾಲೆಗಳ ಪುನಶ್ಚೇತನ– ಉನ್ನತಿಗೆ ತುರ್ತಾಗಿ ಕೆಲವು ಕ್ರಮಗಳನ್ನು ಜಾರಿಗೊಳಿಸುವ ಅಗತ್ಯವಿದೆ. ಜತೆಗೆ ಕನ್ನಡವನ್ನೂ ಅನ್ನದ ಭಾಷೆಯಾಗಿ ರೂಪಿಸುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕಿದೆ.

ಇಂಗ್ಲಿಷ್ ಕಾನ್ವೆಂಟ್ ಮಾದರಿಯಲ್ಲೇ 'ಕರ್ನಾಟಕ ಪಬ್ಲಿಕ್ ಶಾಲೆ'ಗಳನ್ನು ಆರಂಭಿಸುವುದಾಗಿ ಶಿಕ್ಷಣ ಸಚಿವರು ಕೆಲವು ವಾರಗಳ ಹಿಂದೆ ನುಡಿದಿದ್ದರು. ಆದರೆ ಮುಖ್ಯಮಂತ್ರಿಯವರ ಬಜೆಟ್ ಭಾಷಣದಲ್ಲಿ ಆ ಬಗ್ಗೆ ಯಾವ ಉಲ್ಲೇಖವೂ ಇಲ್ಲ! ಕನ್ನಡ– ಇಂಗ್ಲಿಷ್ ಶಾಲೆಗಳ ನಡುವಣ ಅಂತರವನ್ನು ಕಡಿಮೆ ಮಾಡಲು ಇಂತಹ ಶಾಲೆಗಳು ಖಂಡಿತಾ ನೆರವಾಗುತ್ತವೆ. ಈ ಮಧ್ಯೆ ಬ್ರಿಟಿಶ್ ಕೌನ್ಸಿಲ್ ಸಹಯೋಗದೊಂದಿಗೆ ರಾಜ್ಯದ ಸರ್ಕಾರಿ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ಭಾಷಾ ಕಲಿಕೆಯ ಕೌಶಲ ಬೋಧನೆಗೆ ಸರ್ವಶಿಕ್ಷಾ ಅಭಿಯಾನ ಮಾಡಲು ಶಿಕ್ಷಣ ಇಲಾಖೆ ಒಪ್ಪಂದ ಮಾಡಿಕೊಂಡಿರುವುದು ಸ್ವಾಗತಾರ್ಹ ಹೆಜ್ಜೆ. ರಾಜ್ಯದ 2.17 ಲಕ್ಷ ಶಾಲಾ ಶಿಕ್ಷಕರಿಗೆ 1250 ಸಂಪನ್ಮೂಲ ವ್ಯಕ್ತಿಗಳು ಈ ತರಬೇತಿ ನೀಡುವುದಾಗಿ ಅಭಿಯಾನದ ಮುಖ್ಯಸ್ಥ ಸುಬೋಧ್ ಯಾದವ್ ತಿಳಿಸಿದ್ದಾರೆ. ಮಹಾರಾಷ್ಟ್ರ ಮತ್ತು ಬಿಹಾರಗಳಲ್ಲಿ ಈ ಯೋಜನೆ ಜಾರಿಯಾಗಿದೆ. ಇಂಗ್ಲಿಷ್ ಚೆನ್ನಾಗಿ ಬಂದರೆ, ನಮ್ಮ ಜನಸಾಮಾನ್ಯರಲ್ಲಿ ಅದರ ಬಗ್ಗೆ ಇರುವ ಹಲವು ನಿಗೂಢ ಮಿಥ್ಯೆಗಳ ಗುಳ್ಳೆಯೂ ಒಡೆಯುತ್ತದೆ. ಸರಕಾರ ಈ ನಿಟ್ಟಿನಲ್ಲಿ ಇನ್ನಷ್ಟು ಮಹತ್ವದ ಹೆಜ್ಜೆಗಳನ್ನು ಇಡಬೇಕಿದೆ. ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ಅತ್ಯಧಿಕ ಅನುದಾನ ನೀಡಿ, ಮೂಲಸೌಲಭ್ಯಗಳನ್ನು ಹೆಚ್ಚಿಸಿ ಸರ್ಕಾರಿ ಶಾಲೆಗಳನ್ನು ಪುನಶ್ಚೇತನಗೊಳಿಸಿದರೆ, ಜನಸಾಮಾನ್ಯರ ಮೇಲಿನ ಇಂಗ್ಲಿಷ್ ಕಾನ್ವೆಂಟ್‌ಗಳ ದಬ್ಬಾಳಿಕೆ ಕಡಿಮೆಯಾಗಬಹುದು. ಭಾಷೆಯ ಹೆಸರಿನಲ್ಲಿ ತಾರತಮ್ಯವೂ ಇಲ್ಲವಾಗಬಹುದು.

**ಬಿ.ಎಂ.ಹನೀಫ್**




ಈಶ್ವರ್